ದಿನಾಂಕ: 05-09-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು : ವಾದಿ ಪರ ಶ್ರೀ ಎಂ.ಬಿ.ಹೆಚ್ ವಕೀಲರಿಂದ,</u>**

ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಮನೆಯಲ್ಲಿ ಮಂತ್ರ ಬರೆಯುತ್ತೇನೆ ಎಂದರೆ ಸರಿಯಲ್ಲ. ನನಗೆ ವೀರಾಪುರ ಸಿದ್ದಪ್ಪ ಮತ್ತು ವೀರಪಾಪುರ ಸಿದ್ದಪ್ಪಾ ಎಂದು ಕರೆಯುತ್ತಾರೆ ಎಂದರೆ ಸರಿ. ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿರುತ್ತದೆ. 1 ನೇ ವಾದಿ ನನ್ನ ಮಗಳು ಎಂದರೆ ಸರಿ. 2 ನೇ ವಾದಿ ನನ್ನ ಮಗ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಹೆಂಡತಿ ಎಂದರೆ ಸರಿ. ನಾನು, ನನ್ನ ಮಕ್ಕಳು ಮತ್ತು ನನ್ನ ಹೆಂಡತಿ ಚೆನ್ನಾಗಿ ಇರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು, ವಾದಿಗಳು ಮತ್ತು 2 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಜೀವನ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನನ್ನ ಹೆಂಡತಿ ಎಂದು ತೋರಿಸಲು ವಂಶವೃಕ್ಷ ಪ್ರಮಾಣ ಪತ್ರ, ಆದಾರ ಕಾರ್ಡ್, ಪಡಿತರ ಚೀಟಿ ಹಾಗೂ ವರ್ಗಾವಣೆ ಪ್ರಮಾಣ ಪತ್ರ ಹಾಕಿರುತ್ತಾರೆ ಎಂದರೆ ಸರಿ.

ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಜಮೀನು ಸರ್ವೆ ನಂಃ 240 ವಿಸ್ತೀರ್ಣ 3 ಎಕರೆ 50 ಸೆಂಟ್ಸ್ ಇರುತ್ತದೆ. ಸದರಿ ಜಮೀನು ಸರ್ಕಾರ ಕೊಟ್ಟಿರುವ ಜಮೀನು ಎಂದರೆ ಸರಿಯಲ್ಲ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ13.10.2003 ರಂದು ಸರ್ಕಾರದವರು ನನ್ನ ಹೆಸರಿಗೆ ದಾವಾ ಆಸ್ತಿಗೆ ಸಂಬಂದಪಟ್ಟಂತೆ ಸಾಗುವಳಿ ಚೀಟಿ ಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯವರು ಮತ್ತು 2 ನೇ ಪ್ರತಿವಾದಿ ಸ್ವಾಧೀನ ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಬಿ.ಕೆ.ಜಿ ಕಂಪನಿಯವರಿಗೆ ದಾವಾ ಜಮೀನು ಮಾರಾಟ ಮಾಡಲು ಹೋಗಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಯು ಅದಕ್ಕೆ ತಕರಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮಾರಾಟ ಮಾಡಲು ಹೋದಾಗ ವಾದಿಯವರು ಮತ್ತು 2 ನೇ

ಪ್ರತಿವಾದಿಯವರು ಸದರಿ ಜಮೀನಿನಲ್ಲಿ ನಮಗೆ ಹಕ್ಕು ಇದೆ ಎಂದು ಹೇಳಿ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ದಿ:23.09.2021 ರಂದು 2 ನೇ ಪ್ರತಿವಾದಿ ನನಗೆ ಮತ್ತು ಬಿ.ಕೆ.ಜಿ ಕಂಪನಿಯವರಿಗೆ ನೋಟಿಸ್ ಕಳುಹಿಸಿರುತ್ತಾರೆ ಎಂದರೆ ಸರಿ. ಸದರಿ ನೋಟಿಸ್ ನನಗೆ ಮುಟ್ಟಿರುತ್ತದೆ ಎಂದರೆ ಸರಿ. ದಿ:06.10.2021 ರಂದು ನಾನು ನನ್ನ ವಕೀಲರ ಮುಖಾಂತರ ಪ್ರತ್ಯೂತ್ತರ ನೋಟಿಸ್ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿ ಪ್ರತ್ಯೂತ್ತರ ನೋಟಿಸ್ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಗೂ ಸಹ ಪ್ರತ್ಯೂತ್ತರ ನೋಟಿಸ್ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನೋಟಿಸ್ ನಲ್ಲಿ 2 ನೇ ಪ್ರತಿವಾದಿ ನನ್ನ ಹೆಂಡತಿ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ನೋಟಿಸ್ ನಲ್ಲಿ ದಾವಾ ಆಸ್ತಿಯನ್ನು ಹರಾಜಿನಲ್ಲಿ ಖರೀದಿ ಮಾಡಿರುತ್ತೇನೆ ಮತ್ತು ಅದು ನನ್ನ ಸ್ವಯಾರ್ಜಿತ ಆಸ್ತಿ ಎಂದು ಹೇಳಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಿ:13.10.2003 ರಂದು ಸರ್ಕಾರದವರು ನನಗೆ ಸಾಗುವಳಿ ಪತ್ರ ನೀಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ನನ್ನ ಪ್ರತಿ ಉತ್ತರ ನೋಟಿಸ್ ನಲ್ಲಿ ದಾವಾ ಆಸ್ತಿ ಹರಾಜಿನಲ್ಲಿ ಪಡೆದಿರುತ್ತೇನೆ ಎಂದು ಹೇಳಿದ್ದು, ಅದರಲ್ಲಿ ಯಾವುದು ಸತ್ಯ ಎಂದರೆ ಸಾಕ್ಷಿಯ ಯಾವುದು ಸತ್ಯ ಇಲ್ಲ ಎಂದು ನುಡಿಯುತ್ತಾರೆ.

ದಿ:24.08.2020 ರಂದು 2 ನೇ ಪ್ರತಿವಾದಿಯು, ನನಗೆ, ತಹಶೀಲ್ದಾರ, ಸಂಡೂರು, ನೋದಣಿ ಅಧಿಕಾರಿ, ಸಂಡೂರು ರವರಿಗೆ ತಿಳುವಳಿಕೆ ನೋಟಿಸ್ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟಿಸ್ ನಲ್ಲಿ ಸರ್ವೆ ನಂ:240 ವಿಸ್ತೀರ್ಣ 3 ಎಕರೆ 50 ಸೆಂಟ್ಸ್ ಎಂದು ಬರೆದಿತ್ತು ಎಂದರೆ ಸರಿ. ಸದರಿ ನೋಟಿಸ್ ನಲ್ಲಿ ವಾದಿಗಳು ನನ್ನ ಮಕ್ಕಳು ಎಂದು ಬರೆದಿರುತ್ತಾರೆ ಎಂದರೆ ಸರಿ. ಸದರಿ ತಿಳುವಳಿಕೆ ಪತ್ರ ನನಗೆ ಮುಟ್ಟಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ದಾವಾ ಆಸ್ತಿಯನ್ನು ಮಾರಾಟ ಮಾಡಬಾರದು ಎಂದು ಅಧಿಕಾರಿಗಳಿಗೆ 2 ನೇ ಪ್ರತಿವಾದಿ ಮುಂಚಿತವಾಗಿ ತಕರಾರು ಮಾಡಿದ್ದರು ಎಂದರೆ ಸರಿ. ಸದರಿ ಪತ್ರದಲ್ಲಿ 2 ನೇ ಪ್ರತಿವಾದಿಗೆ ಸದರಿ ಜಮೀನಿನಲ್ಲಿ ಹಕ್ಕು ಇದೆ ಎಂದು ಹೇಳಿಕೊಂಡಿದ್ದರು ಎಂದರೆ ಸರಿ. ಈ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ ಎಂದರೆ ಸರಿ.

ದಿಃ05.10.2021 ಮತ್ತು ದಿಃ24.08.2021 ರಲ್ಲಿ ನನ್ನ ಪ್ರತಿ ಉತ್ತರ ನೋಟಿಸ್ ನಲ್ಲಿ ನನಗೆ ಈರಮ್ಮ ಎಂದು ಹೆಂಡತಿ ಇರುತ್ತಾಳೆ ಎಂದು ಹೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಹೇಳಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರತಿ ಉತ್ತರ ನೋಟಿಸ್ ನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಈರಮ್ಮ ರವರು ನನ್ನ ಹೆಂಡತಿ ನಮಗೆ ಇಬ್ಬರು ಮಕ್ಕಳು ಇರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಕಿರುತ್ತೇನೆ. ನಾನು ಈ ರೀತಿ ದಾಖಲೆಗಳನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ಈರಮ್ಮ ರವರು ದೇವದಾಸಿ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲಾತಿಗಳಲ್ಲಿ ಈರಮ್ಮ ತಂದೆ ಜೋಗಯ್ಯ ಎಂದು ಇರುತ್ತದೆ ಎಂದರೆ ಸರಿ. ನಾನು ಈರಮ್ಮ ರವರಿಗೆ ಹಿಂದು ಸಂಪ್ರದಾಯದ ಪ್ರಕಾರ ಮದುವೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ರುಜುವಾತು ಪಡೆಸಲು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗೀ ದಾವಾ ಆಸ್ತಿಯಲ್ಲಿ ಈರಮ್ಮ ಮತ್ತು ಅವರ ಮಕ್ಕಳಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ನಾನು ಸ್ವಂತ ಆಸ್ತಿ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿಕೊಂಡಿದ್ದು, ಅದು ಸುಳ್ಳು ಆಗಿರುತ್ತದೆ. ನಾನು ಹರಾಜಿನಲ್ಲಿ ಖರೀದಿ ಮಾಡಿರುತ್ತೇನೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಗಳಿಗೆ, ನನಗೆ ಮತ್ತು 2 ನೇ ಪ್ರತಿವಾದಿಯ ಜೀವನಗೊಸ್ಕರ ದಾವಾ ಆಸ್ತಿಯನ್ನು ಸರ್ಕಾರವರು ನೀಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿಯು ದಾವಾ ಆಸ್ತಿಯಲ್ಲಿ ಭಾಗ ಕೊಡಬೇಕು ಎಂದು ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ. ನಾನು ವಾದಿಗಳಿಗೆ ದಾವಾ ಆಸ್ತಿಯಲ್ಲಿ ಭಾಗ ಮಾಡಿ ಕೊಟ್ಟಿರುವುದಿಲ್ಲ. ನಾನು ಅವರಿಗೆ ನೋಂದಣಿ ಸಹ ಮಾಡಿಸಿ ಕೊಟ್ಟಿರುವುದಿಲ್ಲ. ವಾದಿಗಳು ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಬೇಡ ಎಂದು ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುವುದಿಲ್ಲ. ದಾವಾ ಆಸ್ತಿಯ ಜಮೀನಿಗೆ ಸಂಬಂದಪಟ್ಟಂತೆ ಪಹಣಿ ನನ್ನ ಹೆಸರಿಗೆ ಇರುತ್ತದೆ ಎಂದರೆ ಸರಿ. ಹಾಗಾಗೀ ವಾದಿಗಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳಿಗೂ ಹಕ್ಕು ಇರುತ್ತದೆ ಹಾಗಾಗೀ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ಯಾವುದೇ ಆಸ್ತಿ ಕೊಡಬಾರದು ಎಂದು ಉದ್ದೇಶಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ದಾಖಲಾತಿಗಳು ನನ್ನ ಹೆಸರಿಗೆ ಇರುವುದರಿಂದ ವಾದಿ ತಮ್ಮ ಭಾಗ ಕೇಳಲು ಈ ದಾವೆ

ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನಾನು ಮಾರಾಟ ಮಾಡುವ ಉದ್ದೇಶವನ್ನು ಹೊಂದಿಕೊಂಡಿರುವುದರಿಂದ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.